ದಿನಾಂಕಃ 23.10.2025

ಎಸ್.ಸಿ.ಃ 25/2023

ಪಿ.ಡಬ್ಲ್ಯೂ: 2

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರಿದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ವಕೀಲರಿಂದಃ

ನಾನು ಈ ದಿನ ಹಾಜರು ಪಡಿಸಿರುವ ದಾಖಲಾತಿಗಳನ್ನು ನಿಶಾನೆಗಳಾಗಿ ಗುರುತಿಸಬೇಕಾಗಿ ಮನವಿ.

| | | |
|---|---|---|
| ನಿಪಿ **17** | : | ದಿ.15.04.2016 ರಂದು ಕೆ.ಎಂ.ದೊಡ್ಡಿ ಪೋಲೀಸ್ ಠಾಣೆಯವರು ನೀಡಿರುವ ಮನವಿ. |
| ನಿಪಿ **18** | : | ಮರಣೋತ್ತರ ಪರಿಕ್ಷಾ ವರದಿ |

**ಪಾಟೀ ಸವಾಲುಃ ಎದುರುದಾರರ ಪರ ವಕೀಲರರಿಂದಃ**

ಬಿದರೆ ಹೊಸಹಳ್ಳಿ ಇಂದ ಕೆ.ಎಂ.ದೊಡ್ಡಿ ಪೋಲಿಸ್ ಠಾಣೆ ಸುಮಾರು 4 ಕೀ.ಮೀ ದೂರ ಆಗಬಹುದು. ಬಿದರೆ ಹೊಸಹಳ್ಳಿಯೂ ಪಶು ಆಸ್ಪತ್ರೆ ಇದೆ ಎಂದರೆ ಸರಿ. ಸಾಕ್ಷಿ ಮುಂದುವರಿದು ಬದರೆ ಹೊಸಹಳ್ಳಿಯಲ್ಲಿ ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರ ಇರುತ್ತದೆ, ಅಲ್ಲಿ Veterinary Inspector ಇರುತ್ತಾರೆ, ಪಶು ವೈದ್ಯರು ಇರುವುದಿಲ್ಲ ಎಂದು ಹೇಳುತ್ತಾರೆ. ಸದರಿ ಮೃತ ಪಟ್ಟ ಹಸುವಿಗೆ ಯಾವುದೇ insurance ಮಾಡಿಸಿರಲಿಲ್ಲ. ಮೃತ ಪಟ್ಟ ಹಸುವಿನ ಬೆಲೆ ಸುಮಾರು ರೂ.50 ಸಾವಿರ ಆಗುತ್ತದೆ ಎಂದು ಯಾವ ಆಧಾರದ ಮೇಲೆ ಹೇಳಿದ್ದೀರಿ ಎಂದರೆ ಸಾಕ್ಷಿ ಹಸುವಿನ ವಯಸ್ಸು ಮತ್ತು ಅದರ ದೇಹದಾಡ್ಯತೆ ಮತ್ತು ಅದು ನೀಡುವ ಹಾಲಿನ ಸಾಮರ್ಥ್ಯ ಎಲ್ಲವನ್ನು ಆಧರಿಸಿ ಹೇಳಿದ್ದೇನೆ ಎಂದು ಉತ್ತರಿಸುತ್ತಾರೆ. ಈ ಮೇಲೆ ಹೇಳಿದ ವಿಚಾರಕ್ಕೆ ಸಂಬಂಧಪಟ್ಟಂತೆ ದಾಖಲಾತಿಯನ್ನು ಹಾಜರು ಪಾಡಿಸಿಲದ್ದೀರಾ ಎಂದರೆ ಸಾಕ್ಷಿ ನಮ್ಮಲ್ಲಿ ಸಿಗುವುದಿಲ್ಲ ಹಾಲಿನ ಡೈರಿಯಲ್ಲಿ ಸಿಗುತ್ತದೆ ಎಂದು ಉತ್ತರಿಸುತ್ತಾರೆ. ಹಸು ರೂ.50 ಸಾವಿರ ಬೆಲೆ ಬಾಳುತ್ತದೆ ಎಂದು ಅರ್ಜಿದಾರರಿಗೆ ಸಹಾಯವಾಗಲಿ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಸರಿಯಲ್ಲ ಎಂದು ಉತ್ತರಿಸುತ್ತಾರೆ. ಮೃತ ಹಸುವಿಗೆ 5 ವರೆ ವರ್ಷ ವಯಸ್ಸಾಗಿತ್ತು ಎಂದು ಸುಳ್ಳು ಹೇಳಿದ್ದೀರಿ, ಅದಕ್ಕಿಂತ ಹೆಚ್ಚು ವಯಸ್ಸಾಗಿತ್ತು ಎಂದರೆ ಸಾಕ್ಷಿ ಇಲ್ಲ, ಹಸುವಿನ ಹಲ್ಲುಗಳನ್ನು ನೋಡಿ ಅದರ ಆಧಾರದ ಮೇಲೆ ವಯಸ್ಸನ್ನು ಹೇಳುತ್ತೇವೆ ಎಂದು ಉತ್ತರಿಸುತ್ತಾರೆ. ಬಿದರ ಹೊಸಹಳ್ಳಿಯಲ್ಲಿಯೇ ಪಶು ಆಸ್ಪತ್ರೆ ಇದ್ದು, ಅಲ್ಲಿಯೇ

ಮರಣೋತ್ತರ ಪರೀಕ್ಷೆ ಮಾಡಲು ಅವಕಾಶವಿದ್ದರೂ ನೀವು ಕೆ.ಎಂ.ದೊಡ್ಡಿಯಿಂದ ಹೋಗಿ ಮರಣೋತ್ತರ ಪರೀಕ್ಷೆ ಮಾಡಿದ್ದೀರಿ ಎಂದರೆ ಸಾಕ್ಷಿ ಅಲ್ಲಿ ಯಾವುದೇ ನುರಿತ ಪಶು ವೈದ್ಯರು ಇರುವುದಿಲ್ಲ, Veterinary inspector ಅವರಿಗೆ ಹಸುವಿನ ಮರಣೋತ್ತರ ಪರೀಕ್ಷೆ ಮಾಡುವಷ್ಟು ಜ್ಞಾನ ಇರುವುದಿಲ್ಲ ಎಂದು ಉತ್ತರಿಸುತ್ತಾರೆ. ನಿಪಿ17 ಮತ್ತು 18 ಅನ್ನು ನಾನು ಅರ್ಜಿದಾರರಿಗೆ ಸಹಾಯವಾಗಲಿ ಎಂದು ಹಾಜರು ಪಡಿಸಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ.ಕೇ. ಸರಿ ಇದೆ

(ಶ್ರೀಮತಿ.ಹರಿಣಿ.ಎಂ.ಎಸ್.)
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಮದ್ದೂರು.